





ಸಂಗೀತದ ಕೊಳಲುಗಳಲ್ಲಿ 8 ತೂತುಗಳಿವೆ.

ಹೊನ್ನೆ ಇಲ್ಲವೆ ಸಾಸಿವೆ ಎಣ್ಣೆಯನ್ನು ಕೊಳಲಿನ ಹೊರಮೈಗೆ ಹಚ್ಚಿ ಗ್ಯಾಸ್ ಬೆಂಕಿಯಲ್ಲಿ ಸ್ವಲ್ಪ ಬಿಸಿ ಮಾಡಬೇಕು. ಇದನ್ನು ಟೆಂಪರಿಂಗ್ ಎನ್ನುತ್ತಾರೆ. ಕೊಳಲನ್ನು ಆಕರ್ಷಣೀಯಗೊಳಿಸಲು ವಿವಿಧ ಬಣ್ಣಗಳ ನೈಲಾನ್ ದಾರಗಳನ್ನು ಸುತ್ತುವುದಿದೆ. ಕೊಳಲಿನ ಕೊನೆಯ ಭಾಗದಲ್ಲಿದ್ದರೆ ಧ್ವನಿಯ ಗುಣಮಟ್ಟದಲ್ಲಿ ಏನೂ ವ್ಯತ್ಯಾಸವಾಗುವುದಿಲ್ಲ. ಆದರೆ ನಡು ಭಾಗದಲ್ಲಿದ್ದರೆ ಕೊಳಲಿನ ಸಹಜ ಅನುರಣನ ಪ್ರಕ್ರಿಯೆಗೆ ತೊಡಕು ಉಂಟಾಗುತ್ತದೆ.

ಜಾತ್ರೆಗಳಲ್ಲಿ ಕಡಿಮೆ ಬೆಲೆಗೆ ದೊರೆಯುವ ಕೊಳಲುಗಳು ಶಾಸ್ತ್ರಬದ್ಧವಾಗಿ ತಯಾರಿಸಿದ್ದಲ್ಲ. ಅವುಗಳಿಂದ ಶಬ್ದ ಬರುತ್ತದೆಯೇ ಹೊರತು ಸ್ವರಗಳಲ್ಲ. ದೊಡ್ಡ ಗಾತ್ರದ ಕೊಳಲೊಂದು ರೂಪು ಪಡೆಯಲು 2 ರಿಂದ 3 ದಿವಸಗಳ ಪರಿಶ್ರಮ ಬೇಕು. ಮಧ್ಯಮ ಗಾತ್ರದ್ದು ದಿನಕ್ಕೆ ಎರಡು ತಯಾರಿಸಬಹುದು. ಕೊಳಲುಗಳಲ್ಲಿ 100ಕ್ಕೂ ಮಿಕ್ಕಿ ವಿಧಗಳಿದ್ದು ಇದು ಸೈಡ್ ಬ್ಲೋನ್ ರೀತಿಯದ್ದು ಎಂದು ಒಂದು ಕೊಳಲನ್ನು ತೋರಿಸಿದರು ಕೃಷ್ಣರಾಜ.

ಅಂದ ಹಾಗೆ, ಗುಣಮಟ್ಟದ ಕೊಳಲಿಗೆ ದೇಶವ್ಯಾಪಿ ಬೇಡಿಕೆ ಇದೆ. ಕೊಳಲು ವಾದನ ಇವತ್ತು ಲಕ್ಷಾಂತರ ಜನರನ್ನು ಆಕರ್ಷಿಸುತ್ತಿದೆ. ಶ್ರದ್ಧೆ ಇದ್ದವರು ಮಾತ್ರ ಕಠಿಣ ಪರಿಶ್ರಮದಿಂದ ಕೊಳಲು ವಾದನ ಕಲಿಯಬಹುದು. ಖುಷಿಗಾಗಿ ಕೊಳಲು ಕಲಿಯುವವರೂ ಇದ್ದಾರೆ. ಕೇರಳ, ಕರ್ನಾಟಕದ ಕೊಳಲು ವಾದಕರು ಕೃಷ್ಣರಾಜರನ್ನು ಹುಡುಕಿಕೊಂಡು ಬರುತ್ತಾರೆ. ಅವರಿಚ್ಛೆಯ ಕೊಳಲಿಗೆ ಧ್ವನಿಯಾಗುತ್ತಾರೆ, ವೇಣುನಾದ ಜಗದಗಲ ಅನುರಣಿಸುತ್ತದೆ.

(ಕೃಷ್ಣರಾಜರನ್ನು ಸಂಪರ್ಕಿಸಲು ಮೊಬೈಲ್: 96562 05380)